ತ್ತಿದ್ದವು ಈಗ ಎಸ್.ಟಿ. ಆದ್ದರಿಂದ ಶೇಕಡ ೩ ರಂತೆ ಕೇವಲ ೧೪೭ ಮಾಸಲಾತಿ ಸ್ಥಾನಗಳು ದೊರೆತಿವೆ. ಇದರಿಂದ ಸುಮಾರು ೩೪೩ ಮಾಸಲಾತಿ ಸ್ಥಾನಗಳು ಅನ್ಯಾಯವಾಗಿದೆ. ಆದ್ದರಿಂದ ಈ ತಾರತಮ್ಯವನ್ನು ಸರಿಪಡಿಸಿ ಈಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತೇನೆ. ಸರ್ಕಾರ ಈ ಸದನದಲ್ಲಿ ಆಶ್ವಾಸನೆ ನೀಡಬೇಕಾಗಿ ಕೋರುತ್ತೇನೆ.

೩–೩೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲಕ್ಕಪ್ಪನವರು ಒಂದು ಮಹತ್ವದ ವಿಚಾರವನ್ನು ಎತ್ತಿದ್ದಾರೆ. ಎಸ್‌ಸಿಎಸ್‌ಟಿ ವಿಚಾರದಲ್ಲಿ ಕಾಡುಕುರುಬ, ನಾಯಕರು, ಎಲ್ಲರನ್ನೂ ಸೇರಿಸಿದ್ದೀರಿ. ಅವರಿಗೂ ಈ ಲಾಭ ಸಿಗಲಿ ಎಂದು ಹೇಳಿದ್ದಾರೆ. ಅವರು ಹೇಳಿರತಕ್ಕ ವಿಚಾರವನ್ನು ಪರಿಶೀಲಿಸುತ್ತಿದ್ದೇವೆ. ಜನಸಂಖ್ಯೆ ಆಧಾರದ ಮೇಲೆ ಅವರಿಗೆ ಸಿಗುತ್ತಿರಲಿಲ್ಲ. ಆದರಲ್ಲಿ ಇವರ ಹೊರತಾಗಿ ಬೇರೆ ಬೇರೆ ಜನಾಂಗದವರು ಇದ್ದಾರೆ. ಆ ಜನಾಂಗದವರ ಮನವಿಗಳ ಆಧಾರದ ಮೇಲೆ, ಒತ್ತಾಯದ ಆಧಾರದ ಮೇಲೆ ಕ್ರಮ ಕೈಗೊಂಡಿದ್ದೇವೆ. ಅವರು ಹೇಳಿದ ವಿಚಾರವನ್ನು ಪರಿಶೀಲಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಹಿಂದುಳಿದ ವರ್ಗಕ್ಕೆ ಯಾವ ಅನುಕೂಲವೂ ಆಗುತ್ತಿಲ್ಲ.

ಅಧ್ಯಕ್ಷರು.—ನಿಯಮ ೩೫೯ರಲ್ಲಿ ಮತ್ತೆ ವಿವರವನ್ನು ಕೇಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಅವರ ಹಿತಕ್ಕೆ ದಕ್ಕೆ ತರತಕ್ಕ ಪ್ರಯತ್ನವನ್ನು ಸರ್ಕಾರ ಮಾಡಿದೆ. ಸರ್ಕಾರಕ್ಕೆ ಅವರ ಬಗ್ಗೆ ಕಳಕಳಿ ಇದ್ದರೆ ಶೇಕಡ ೨೦ರಷ್ಟು ರಿಸರ್ವೇಷನ್ ಅನ್ನು ಬಿಸಿ. ಬಿಟಿ.ಯಂಪರಿಗೆ ಕೊಟ್ಟು ವಿದ್ಯಾಭ್ಯಾಸ ಸೌಲಭ್ಯ ಒದಗಿಸಿಕೊಡಲಿ. ಇದು ೯ ಲಕ್ಷ ಜನರ ಭವಿಷ್ಯದ ವಿಚಾರ. ಅವರನ್ನು ಇಷ್ಟು ನಿರ್ಲಕ್ಷ್ಯವಾಗಿ ನೋಡತಕ್ಕದ್ದು ಸರಿಯಲ್ಲ.

ಅಧ್ಯಕ್ಷರು.—ನೀವು ಕೂರುತ್ತೀರೋ ಇಲ್ಲವೋ ? ನೀವು ಹೇಳುವುದೇನೂ ಇಲ್ಲಿ ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅನ್ಯಾಯವಾಗಿದೆ ಎಂದು ಕೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಲೇಬೇಕಾಗುತ್ತದೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ;

"ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧೪ನೇ ನಿಯಮದ ಮೇರೆಗೆ ದಿನಾಂಕ ೨೬ನೇ ಆಗಸ್ಟ್ ೧೯೮೬ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ಈ ಮೂಲಕ ಕಳುಹಿಸುತ್ತಿದ್ದೇನೆ.

೧. ೧೯೮೬ನೇ ಇಸವಿಯ ಕರ್ನಾಟಕ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ,

೨. ೧೯೮೬ನೇ ಇಸವಿಯ ಕರ್ನಾಟಕ ನಗರಸಭೆಗಳ (ತಿದ್ದುಪಡಿ) ವಿಧೇಯಕ"

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧೪ನೇ ನಿಯಮದ ಮೇರೆಗೆ ದಿನಾಂಕ ೨೬ನೇ ಆಗಸ್ಟ್ ೧೯೮೬ರಂದು ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕಾರವಾದ ಕರ್ನಾಟಕ ವೃತ್ತಿಪ್ರಾಯ ಉತ್ಪನ್ನಗಳ ಮಾರಾಟದ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, ೧೯೮೬ನ್ನು ಈ ಮೂಲಕ ಕಳುಹಿಸುತ್ತಿದ್ದೇನೆ."